ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ.ಸಿ.ನಂಃ1546/25**

ಪಿಡಬ್ಲ್ಯುಃ – 2

ಸಿಡಬ್ಲ್ಯುಃ – 1

ದಿನಾಂಕಃ 02.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಪ್ರಶಾಂತ್ |
| ತಂದೆಯ ಹೆಸರು | – ಲೋಕನಾಥ್ ಸಿ ಟಿ |
| ವಯಸ್ಸು | – 59 ವರ್ಷ |
| ವೃತ್ತಿ | – ವ್ಯವಸಾಯ |
| ವಾಸಸ್ಥಳ | – ಹೊದುಡ್ಡು ಗ್ರಾಮ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ಚಾಸಾ–2 ರಿಂದ 7 ನನಗೆ ಗೊತ್ತು. ಆರೋಪಿತರು ನನಗೆ ಗೊತ್ತು. ಹೊದ್ದೂರು ಗ್ರಾಮದ ಸರ್ವೆ ನಂಬರ್ 49/3 ರಲ್ಲಿ ಚಾಸಾ–2 ರವರಿಗೆ ಸೇರಿದ ಕಾಫಿ ತೋಟ ಇರುತ್ತದೆ. ಚಾಸಾ–2 ರವರ ಕಾಫಿ ತೋಟದ ಪಕ್ಕ ಸರ್ವೆ ನಂಬರ್ 49/1 ರಲ್ಲಿ ನನ್ನ ಬಾಪ್ತು ಕಾಫಿ ತೋಟ ಇರುತ್ತದೆ. ಸದರಿ ನನ್ನ ತೋಟಕ್ಕೆ ಹೋಗಲು ಚಾಸಾ–2 ರವರ ತೋಟದ ಮಧ್ಯದಲ್ಲಿರುವ ರಸ್ತೆಯಿಂದಲೇ ಹೋಗಬೇಕು. ಸದರಿ ರಸ್ತೆಯನ್ನು ನಾನು ಸುಮಾರು 25 ವರ್ಷಗಳಿಂದ ನನ್ನ ತೋಟಕ್ಕೆ ಹೋಗಲು ಬಳಸುತ್ತಿದ್ದೇನೆ. ದಿಃ17.11.2024 ರಂದು ಮದ್ಯಾಹ್ನ ಸುಮಾರು 2ಗಂಟೆ 15 ನಿಮಿಷ ಸಮಯದಲ್ಲಿ ಆರೋಪಿತರು ಚಾಸಾ–2 ರವರ ಕಾಫಿ ತೋಟಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ, ಅವರ ತೋಟದಲ್ಲಿನ ರಸ್ತೆಯಲ್ಲಿ ಮರದ ಕಂಬಗಳನ್ನು ನೆಟ್ಟು ಟಾರ್ಪಾಲ್ ನಿಂದ ಶೆಡ್ಡನ್ನು ನಿರ್ಮಿಸಿರುತ್ತಾರೆ. ಆಗ ನಾನು ನನ್ನ ತೋಟದಲ್ಲಿದ್ದು, ಆರೋಪಿತರು ಆ ರೀತಿ ಶೆಡ್ ಹಾಕುತ್ತಿದ್ದುದನ್ನು ನೋಡಿ ವಿಚಾರಿಸಲು ಅಲ್ಲಿಗೆ ಹೋದಾಗ ಆರೋಪಿತರು ನಿನಗೂ ಇದಕ್ಕೂ ಸಂಬಂಧ ಇಲ್ಲ ಎಂದು ಹೇಳಿ ಅವಾಚ್ಯ ಶಬ್ಧಗಳಿಂದ ಬೈದರು. ಆರೋಪಿತರು ನಾವು ಎಸ್ ಸಿ ಜನಾಂಗದವರು, ನಿಮ್ಮ ಮೇಲೆ ಅಟ್ರಾಸಿಟಿ ಕೇಸ್ ಹಾಕಿಸುತ್ತೇವೆ ಎಂದು ನನಗೆ ಬೆದರಿಕೆ ಹಾಕಿದರು. ದಿಃ 10.03.2025 ರಂದು ಆರೋಪಿತರ ವಿರುದ್ಧ

ನಾನು ದೂರು ನೀಡಿರುತ್ತೇನೆ. ಆರೋಪಿತರು ಶೆಡ್ಡನ್ನು ತೆರವು ಮಾಡುವುದಾಗಿ ಕೇಳಿಕೊಂಡಿದ್ದರು, ಅದಕ್ಕೆ ನಾನು ಘಟನಾ ದಿನಾಂಕ ದೂರು ಕೊಡಲಿಲ್ಲ ಆದರೆ ನಂತರ ಆರೋಪಿತರು ಶೆಡ್ಡನ್ನು ತೆರವು ಮಾಡಿಲ್ಲ ಹಾಗಾಗಿ ನಾನು ತಡವಾಗಿ ದಿಃ 10.03.2025 ರಂದು ದೂರು ನೀಡಿರುತ್ತೇನೆ. ಆರೋಪಿತರು ಅಕ್ರಮವಾಗಿ ಶೆಡ್ಡನ್ನು ಚಾಸಾ-2 ರವರ ತೋಟದ ರಸ್ತೆಯಲ್ಲಿ ಹಾಕಿ ಸದರಿ ರಸ್ತೆಯನ್ನು ಪೂರ್ತಿ ಬಂದ್ ಮಾಡಿದ್ದಾರೆ, ಇದರಿಂದ ನಾನು ನನ್ನ ತೋಟಕ್ಕೆ ಹೋಗಲು ಆಗುತ್ತಿಲ್ಲ ಹಾಗೂ ನನ್ನ ತೋಟಕ್ಕೆ ಬೇಕಾದ ಗೊಬ್ಬರ, ಕೀಟನಾಶಕಗಳನ್ನು ತೆಗೆದುಕೊಂಡು ಹೋಗಿ ತೋಟ ಮಾಡುಲಾಗುತ್ತಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ದೂರಾಗಿದ್ದು , ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದಿಃ 10.04.2025 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದು ನಾನು ಘಟನಾ ಸ್ಥಳ ತೋರಿದ ಮೇರೆಗೆ ನನ್ನ ಹಾಗೂ ಚಾಸಾ-3 ಮತ್ತು 4 ರವರ ಸಮಕ್ಷಮ ಸಂಜೆ 4.45 ರಿಂದ 5.45 ರವರೆಗೂ ಸ್ಥಳ ಮಹಜರು ಮಾಡಿರುತ್ತಾರೆ.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ಚಾಸಾ-3 ಮತ್ತು 4 ಕೂಡ ಸಹಿ ಮಾಡಿರುತ್ತಾರೆ. ಮಹಜರು ಕಾಲಕ್ಕೆ ಪೊಲೀಸರು ಸ್ಥಳದ ಕಚ್ಚಾ ನಕಾಶೆಯನ್ನು ಬರೆದಿರುತ್ತಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಪೊಲೀಸರು ಮಹಜರು ಕಾಲಕ್ಕೆ ಫೊಟೋ ಕೂಡ ತೆಗೆದಿರುತ್ತಾರೆ. ಆ ಫೊಟೋವನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಮೇಲೆ ಹೇಳಿದ ಚಾಸಾ-2 ರವರ ತೋಟದಲ್ಲಿನ ಮಣ್ಣಿನ ರಸ್ತೆಯನ್ನು ಹೊರತು ಪಡಿಸಿ ನನ್ನ ತೋಟಕ್ಕೆ ಹೋಗಲು ಬೇರೆ

ಯಾವುದೇ ರಸ್ತೆ ಇರುವುದಿಲ್ಲ. ಸದರಿ ರಸ್ತೆಯು ಚಾಸಾ–2 ಹಾಗೂ ನನ್ನ ಕಾಫಿ ತೋಟದಲ್ಲಿ ಬರುತ್ತದೆ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿ ಸಂಖ್ಯೆ 1 ರಿಂದ 5, 7 ಮತ್ತು 8 ನ್ನು ನೋಡಿ ಗುರುತಿಸಿರುತ್ತಾರೆ. 6ನೇ ಆರೋಪಿಯು ಮತ್ತೊಂದು ಕ್ರಿಮಿನಲ್ ಪ್ರಕರಣದಲ್ಲಿ ಬಂಧನದಲ್ಲಿ ಇರುತ್ತಾರೆ ಎಂದು ಆರೋಪಿ ಪರ ವಕೀಲರು ಮೌಖಿಕವಾಗಿ ತಿಳಿಸಿರುತ್ತಾರೆ. 6ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ಹೇಳಿರುತ್ತಾರೆ. 6 ನೇ ಆರೋಪಿಯನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ಹೇಳಿರುತ್ತಾರೆ.

ಪಾಟೀ ಸವಾಲುಃ – ಆರೋಪಿ ಪರ ವಕೀಲರಾದ ಶ್ರೀ. ಕೆ ಕೆ ಆರ್ ರವರಿಂದಃ–

ಚಾಸಾ–2 ರವರು ಕೂಡ ದಿಃ 17.11.2024 ರ ಘಟನೆಯ ಬಾಪ್ತು, ಇದೇ ಆರೋಪಿತರ ವಿರುದ್ಧ ದೂರು ನೀಡಿದ್ದು, ಸದರಿ ಪ್ರಕರಣದಲ್ಲಿ ನಾನು ಸಾಕ್ಷಿಯಾಗಿ ವಿಚಾರಣೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ಸರ್ವೆ ನಂಬರ್ 49/1 ಜಮೀನನ್ನು ನಾನು ದಿವಂಗತ ಉದಿಯಂಡ ಉತ್ತಯ್ಯ ಅವರಿಂದ ಖರೀದಿ ಮಾಡಿರುತ್ತೇನೆ. ನಾನು ಪೊಲೀಸರಿಗೆ ಹೇಳಿಕೆ ಕೊಡುವಾಗ ಸದರಿ ನನ್ನ ತೋಟದ ಕ್ರಯಪತ್ರದ ನಕಲು, ಆರ್ ಟಿ ಸಿ ಯನ್ನು ಪೊಲೀಸರಿಗೆ ನೀಡಿಲ್ಲ. ಪೊಲೀಸರು ನನಗೆ ನನ್ನ ತೋಟದ ಬಾಪ್ತು ದಾಖಲೆ ಕೊಡುವಂತೆ ಕೇಳಿಲ್ಲ ಆದ್ದರಿಂದ ನಾನು ಕೊಟ್ಟಿಲ್ಲ. ನಾನು ಈಗಲೂ ಸಹ ಸರ್ವೆ ನಂಬರ್ 49/1 ರಲ್ಲಿರುವ ಕಾಫಿ ತೋಟದಲ್ಲಿ ಕೃಷಿ ಮಾಡುತ್ತಿದ್ದೇನೆ. 2026 ರಲ್ಲಿ ಬಂದ ಕಾಫಿ ಫಸಲನ್ನು ನೀವು ಸದರಿ ನಿಮ್ಮ ತೋಟದಿಂದ ಕಟಾವು ಮಾಡಿ ಸಾಗಿಸಿದ್ದೀರಾ ಎಂದರೆ ಸಾಕ್ಷಿಯು ಹೌದು ಸಾಗಿಸಿದ್ದೇನೆ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಚಾಸಾ–2 ರವರ ತೋಟದಲ್ಲಿನ ರಸ್ತೆ ಇಲ್ಲ, ನಾನು ಚಾಸಾ–2 ರವರ ತೋಟವನ್ನು ಬಳಸಿಕೊಂಡು ಬಂದು ನನ್ನ ತೋಟಕ್ಕೆ ಹೋಗಿ ಕಟಾವು ಮಾಡಿರುತ್ತೇನೆ. ನನಗೆ ಹೊದ್ದೂರು ಗ್ರಾಮದ ಸರ್ವೆ ನಂಬರ್ 49/1 ಮತ್ತು 49/2 ರಲ್ಲಿ ಯಾವುದೇ ಕಾಫಿ ತೋಟ ಇಲ್ಲ ಎಂದರೆ ಸರಿಯಲ್ಲ. ಚಾಸಾ–2 ರವರಿಗೂ ಕೂಡ ಸರ್ವೆ ನಂಬರ್ 49/2 ರಲ್ಲಿ ಕಾಫಿ ತೋಟ ಇಲ್ಲ ಎಂದರೆ ಸರಿಯಲ್ಲ. ನಾನು ಸರ್ಕಾರಿ ಜಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸರ್ಕಾರಿ ಆಸ್ತಿಯಾದ ಸರ್ವೆ ನಂಬರ್ 49/3 ನ್ನು ಚಾಸಾ–2 ರವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿದ್ದಾರೆ ಎಂದರೆ

ಸರಿಯಲ್ಲ. ಸರ್ಕಾರಿ ಜಾಗವನ್ನು ವಸತಿಗಾಗಿ ಮಂಜೂರು ಮಾಡಿಕೊಡಬೇಕು ಎಂದು 1ನೇ ಆರೋಪಿ ಕಂದಾಯ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಈ ಸಂಬಂಧ ತಹಶೀಲ್ದಾರ್ ಮಡಿಕೇರಿ ಹಾಗೂ ಇತರ ಅಧಿಕಾರಿಗಳು ಬಂದು ಸರ್ವೆ ನಂಬರ್ 49/3 ಯನ್ನು ಪರಿಶೀಲನೆ ಮಾಡಿ ಹೋಗಿದ್ದರು ಎಂದರೆ ಸರಿಯಲ್ಲ. ಆಸ್ತಿ ಕೈ ತಪ್ಪಿ ಹೋಗುತ್ತದೆ ಎಂದು ಹೇಳಿ ಚಾಸಾ–2 ರವರು ಆರೋಪಿತರ ವಿರುದ್ಧ ಈ ಪ್ರಕರಣದಲ್ಲಿ ನನ್ನ ಮುಖಾಂತರ ದೂರು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತೋಟಕ್ಕೆ ಎಂದೂ ಆರೋಪಿತರು ಅತಿಕ್ರಮ ಪ್ರವೇಶ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮೇಲೆ ಅಟ್ರಾಸಿಟಿ ಕೇಸು ಹಾಕುವುದಾಗಿ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಫೋನ್ ಮುಖಾಂತರ ನನಗೆ ಸ್ಥಳ ಮಹಜರಿಗೆ ಬರುವಂತೆ ತಿಳಿಸಿದರು. ಚಾಸಾ–3 ಮತ್ತು 4 ರವರನ್ನು ಚಾಸಾ–2 ರವರು ಮಹಜರು ಕಾಲಕ್ಕೆ ಘಟನಾ ಸ್ಥಳಕ್ಕೆ ಕರೆಸಿದರು. ನಿಪಿ–2 ಮಹಜರನ್ನು ಚಾಸಾ–2 ರವರ ತೋಟದಲ್ಲಿ ಬರೆದಿರುತ್ತಾರೆ. ಮಹಜರು ಮಾಡುವ ಕಾಲಕ್ಕೆ ಪೊಲೀಸರು ನನ್ನ ತೋಟದ ದಾಖಲೆಗಳನ್ನು ಕೇಳಲಿಲ್ಲ, ಅದಕ್ಕೆ ನಾನು ಪೊಲೀಸರಿಗೆ ನೀಡಿಲ್ಲ. ನಿಪಿ–2 ದಾಖಲೆಯನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನಿಪಿ–2 ರಲ್ಲಿ ಘಟನಾ ಸ್ಥಳದ ಚೆಕ್ಕುಬಂಧಿಯನ್ನು ಬರೆದಿದ್ದಾರೆ, ಅದು ನನಗೆ ಗೊತ್ತು. ಪೂರ್ವಕ್ಕೆಃ ಚಾಸಾ–2 ರವರ ಕಾಫಿ ತೋಟ, ಪಶ್ಚಿಮಕ್ಕೆಃ ನನ್ನ ತೋಟ, ಉತ್ತರಕ್ಕೆಃ ಕುಂಬಳದಾಳು ಮುಖ್ಯ ರಸ್ತೆ, ದಕ್ಷಿಣಕ್ಕೆಃ ನಮ್ಮದೇ ಕಾಫಿ ತೋಟ ಇದೆ. ದಿಃ 17.04.2024 ರಂದು ಆರೋಪಿತರು ನನ್ನ ತೋಟಕ್ಕೆ ಅತಿಕ್ರಮ ಪ್ರವೇಶ ಮಾಡಿಲ್ಲ, ಅವಾಚ್ಯ ಶಬ್ಧಗಳಿಂದ ಬೈದಿಲ್ಲ, ಬೆದರಿಕೆ ಹಾಕಿಲ್ಲ, ರಸ್ತೆಯಲ್ಲಿ ಯಾವುದೇ ಶೆಡ್ ಹಾಕಿಲ್ಲ ಎಂದರೆ ಸರಿಯಲ್ಲ. ನಿಪಿ–2 ಮಹಜರಿಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಘಟನಾ ಸ್ಥಳಕ್ಕೆ ಬಂದಿಲ್ಲ, ದಿಃ 10.04.2025 ರಂದು ಸ್ಥಳದಲ್ಲಿ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.